೧) ಕೆಲಸ ಅರಸಿ ಬರುವ ಪ್ರತಿ ಒಬ್ಬರಿಗೂ ಕೆಲಸವನ್ನು ಒದಗಿಸಿಕೊಡುವುದು.

೨) ಸಾಕಷ್ಟು ಕುಡಿಯುವ ನೀರಿನ ಸರಬರಾಜು ಮಾಡುವುದು.

೩) ಜಾನುವಾರುಗಳಿಗೆ ಮೇವು ಒದಗಿಸುವುದು ಮತ್ತು ಗೋಶಾಲೆಗಳನ್ನು ತೆರೆಯುವುದು.

೪) ರೈತರಿಗೆ ಕೃಷಿ ಸಾಮಗ್ರಿ (ಮಿನಿಕಿಟ್ಸ್) ಚೀಲಗಳ ವಿತರಣೆ ಮಾಡುವುದು.

ರಾಜ್ಯದಲ್ಲಿ ಉದ್ಭವವಾಗಿರುವ ಪರಿಸ್ಥಿತಿಯ ಬಗ್ಗೆ

೯೧ (೨೧) ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಉದ್ಭವವಾಗಿರುವ ಬರ ಪರಿಸ್ಥಿತಿಯನ್ನು ಎದುರಿಸಲು ರಾಜ್ಯ ಸರ್ಕಾರವು ತೆಗೆದುಕೊಂಡ ವಿಶೇಷ ಕಾರ್ಯಕ್ರಮಗಳೇನು ?

ಆ) ಮೇವಿನ ಆಹಾರವನ್ನು ಜಿಲ್ಲೆಗಳಲ್ಲಿ ದಾಸ್ತಾನು ಮಾಡುವ ಬಗ್ಗೆ ಸರ್ಕಾರದವರು ತೆಗೆದು ಕೊಂಡಿರುವ ಕ್ರಮಗಳೇನು ?

ಇ) ಕಳೆದ ಸಾಲಿನಲ್ಲಿ ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರಕ್ಕೆ ಒದಗಿಸಿ ಕೊಟ್ಟ ಸಹಾಯ ಧನವನ್ನು ಸರಿಯಾಗಿ ವ್ಯಯ ಮಾಡಿಲ್ಲವೆಂಬುದು ನಿಜವೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಅ) ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

೧) ಕೆಲಸವನ್ನು ಅರಿಸಿ ಬರುವ ಪ್ರತಿ ವ್ಯಕ್ತಿಗೂ ಕೆಲಸವನ್ನು ಒದಗಿಸುವುದು.

೨) ಗ್ರಾಮೀಣ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಸಾಕಷ್ಟು ಕುಡಿಯುವ ನೀರಿನ ಸರಬರಾಜು ಮಾಡುವುದು.

೩) ಜಾನುವಾರುಗಳಿಗಾಗಿ ಸಾಕಷ್ಟು ಮೇವಿನ ಸರಬರಾಜು ಮಾಡುವುದು.

೪) ಅಭಾವ ಪೀಡಿತ ಪ್ರದೇಶಗಳಿಗೆ ಸಾಕಷ್ಟು ಆಹಾರ ಧಾನ್ಯಗಳನ್ನು ಒದಗಿಸುವುದು.

೫) ರೈತರಿಗೆ ಕೃಷಿ ಸಾಮಾಗ್ರಿ (ಮಿನಿ ಕಿಟ್ಸ್) ಚೀಲಗಳನ್ನು ಹಂಚುವುದು.

ಆ) ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳಿಗೂ ಅಭಾವ ಪೀಡಿತ ಜಿಲ್ಲೆಗಳಲ್ಲಿ ಮೇವಿನ ಬ್ಯಾಂಕು ಗಳನ್ನು ತೆರೆದು ಅಲ್ಲಿ ಸಾಕಷ್ಟು ಮೇವಿನ ದಾಸ್ತಾನು ಶೇಖರಿಸಿ ಇಡಲಾಗಿದೆ ಹಾಗೂ ಅಗತ್ಯ ಇರುವ ಕಡೆಗಳಲೆಲ್ಲಾ ಗೋಶಾಲೆಗಳನ್ನು ತೆರೆಯಬೇಕೆಂದು ಸೂಚನೆ ನೀಡಲಾಗಿದೆ.

ಇ) ನಿಜವಲ್ಲ.

ಈ ರಾಜ್ಯದ ಹಜ್‌ಯಾತ್ರೀಕರ ಸೀಟಿನ ಸಂಖ್ಯೆಯ ಬಗ್ಗೆ

೯೪ (೧೬೪) ಶ್ರೀ ಆರ್. ರೋಶನ್ ಬೇಗ್ (ಶಿವಾಜಿನಗರ).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ವಾಯು ಮತ್ತು ಸಮುದ್ರ ಮುಖಾಂತರ ಹಜ್ ಯಾತ್ರೆಗೆ ಹೋಗ ಬಯಸಿ ೧೯೮೫, ೧೯೮೬ ಮತ್ತು ೧೯೮೭ ರಲ್ಲಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು ?

ಆ) ಇವುಗಳಲ್ಲಿ ಮಂಜೂರಾದ ಅರ್ಜಿಗಳ ಸಂಖ್ಯೆ ಎಷ್ಟು ?(ವರ್ಷಾನುಸಾರ ಸಂಖ್ಯೆ ಕೊಡಬೇಕು)

ಇ) ಈಗ ಕೊಡ ಮಾಡಿದ ಸೀಟಿನ ಸಂಖ್ಯೆ ಸಾಕಷ್ಟು ಇಲ್ಲವೆಂಬುದು ತಿಳಿದಿದೆಯೇ ? ಹಾಗಿದ್ದಲ್ಲಿ ಕೇಂದ್ರ ಸರ್ಕಾರವನ್ನು ಈಗಿರುವ ಸೀಟುಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂದು ವಿನಂತಿಸಲಾಗಿದೆಯೇ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ವಕ್ಫ್ ಮಂತ್ರಿಗಳು).—

ಅ) ಕರ್ನಾಟಕ ರಾಜ್ಯ ಹಜ್ ಸಮಿತಿಗೆ ವರ್ಷವಾರು ಬಂದ ಅರ್ಜಿಗಳ ಸಂಖ್ಯೆ ಈ ಕೆಳಗಿನಂತಿದೆ.

	೧೯೮೫	೧೯೮೬	೧೯೮೭
ವಾಯು ಮಾರ್ಗ	೧೧೧೧	೧೦೦೩	೧೦೫೪
ಸಮುದ್ರ ಮಾರ್ಗ	೯೩೬	೯೧೨	೯೩೧

ಆ) ಹಜ್ ಸಮಿತಿ ಮುಂಬಾಯಿಯವರಿಂದ ಒಪ್ಪಿ ಮಂಜೂರಾದ ಕೊಂಡ ಅರ್ಜಿಗಳ ಸಂಖ್ಯೆ : ಈ ಕೆಳಗಿನಂತಿದೆ.

	೧೯೮೫	೧೯೮೬	೧೯೮೭
ವಾಯು ಮಾರ್ಗ	೧೧೧೧	೧೦೦೩	೧೦೫೪
ಸಮುದ್ರ ಮಾರ್ಗ	೨೨೭	೨೨೭	೨೨೭

ಇ) ಹೌದು. ರಾಜ್ಯ ಸರ್ಕಾರವು ಈಗಿರುವ ಸೀಟಿನ ಸಂಖ್ಯೆಯನ್ನು ಹೆಚ್ಚಿಸಲು ಕೇಂದ್ರ ಸರ್ಕಾರ ಮತ್ತು ಹಜ್ ಸಮಿತಿ, ಮುಂಬಾಯಿಯವರಿಗೆ ಒತ್ತಾಯ ಪಡಿಸುತ್ತಾ ಬಂದಿದೆ. ೧೯೮೫ ರಿಂದ ರಾಜ್ಯದ ಕೋಟಾ ಈ ಕೆಳಗಿನಂತಿದೆ.

	೧೯೮೫	೧೯೮೬	೧೯೮೭
ವಾಯು ಮಾರ್ಗ	೮೫೯	೮೬೯	೯೬೨
ಸಮುದ್ರ ಮಾರ್ಗ	೨೨೭	೨೨೭	೨೨೭

ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಹಾಸ್ಟೆಲ್ ಕಟ್ಟಿಡ ಕಟ್ಟುವುದರ ಬಗ್ಗೆ

೯೭ (೩೮೯) ಶ್ರೀ ಟಿ. ಎಸ್. ಮಣಿ (ಕೆ. ಜಿ. ಎಫ್).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕೆ. ಜಿ. ಎಫ್. ವಿಧಾನಸಭಾ ಕ್ಷೇತ್ರವಾಗಿದ್ದು ಅತೀ ಹೆಚ್ಚು ಬಡ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಜನಸಂಖ್ಯೆ ಇರುವುದು ಹಾದಲ್ಲವೇ?

ಆ) ಹಾಗಿದ್ದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಹಾಸ್ಟೆಲ್ ಕಟ್ಟಿಡ ಕಟ್ಟಲು ಸರ್ಕಾರವು ಮುಂದೆ ಬರದಿರಲು ಕಾರಣಗಳೇನು ?

ಇ) ಪ್ರಸಕ್ತ ಸಾಲಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಕಲ್ಯಾಣಕ್ಕಾಗಿ ಕರ್ನಾಟಕ ರಾಜ್ಯದಲ್ಲಿ ಒದಗಿಸಿರುವ ಹಣವೆಷ್ಟು ? ಇದರಲ್ಲಿ ಕೋಲಾರ ಜಿಲ್ಲೆಗೆ ಎಷ್ಟಿದೆ ?

ಈ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಸರ್ಕಾರವು ಹಾಸ್ಟೆಲ್ ಮತ್ತು ಸಮುದಾಯ ಭವನ ನಿರ್ಮಿಸುವ ಬಗ್ಗೆ ಕಡಿಮೆ ಅವಧಿಯೊಳಗೆ ಪರಿಶೀಲಿಸುತ್ತದೆಯೇ ?